ಅಚ್ಚೆ ಪ್ರಾಮಾಣಿಕ; ಇಲ್ಲವಾಗಿಯೂ ಇರಬಹುದು ಸಾಕ್ಷ್ಯ ಉಂಟಲ್ಲ. ಮತ್ತದೇ ಪ್ರಶ್ನೆ ಯಾರನ್ನು, ಯಾವುದನ್ನು ನಂಬುವುದು? ಒಮ್ಮೆ ತನ್ನನ್ನು ಇಲ್ಲಿಂದ ಬಿಡಿಸಿದರೆ ತನ್ನೂರಿಗೆ ಹೋಗಿಬಿಡುತ್ತೇನೆ. ಮತ್ತೆ ಈ ಕಡೆ ತಪ್ಪಿಯೂ ತಲೆಹಾಕುವುದಿಲ್ಲ ಎಂದೆಲ್ಲಾ ಗೋಳಾಡಿದ್ದ. ಅವನ ಹೆಂಡತಿ ಮಕ್ಕಳ ನೆನಪಾದಾಗೆಲ್ಲ ಸಂಕಟವಾಗುತ್ತದೆ. ನಾನೂ ನನ್ನ ಪ್ರಯತ್ನ ಮಾಡುತ್ತಿದ್ದೇನೆ.

ಅಂದು ದಾರಿ ಬದಿಯಲ್ಲಿ ರಾಶಿ ಹಾಕಿಕೊಂಡು ಕೂತಿದ್ದ ಅಕ್ಕಯ್ಯಂದಿರ ಬಳಿ ತರಕಾರಿ ಕೊಳ್ಳುತ್ತಿದ್ದೆ. ನಮ್ಮ ಬಡಾವಣೆ ಹೊಸದಾಗಿದ್ದಾಗ ತರಕಾರಿ ಕೊಳ್ಳುವುದಕ್ಕೂ ಎರಡು ಕಿ.ಮೀ ಹೋಗಬೇಕಿತ್ತು. ಈಗ ನೋಡಿ ನಮ್ಮ ವೈಭೋಗ... ಎಲ್ಲವೂ ಹತ್ತಿರದಲ್ಲೇ ದೊರೆಯುತ್ತವೆ. ಇನ್ನೊಂದಿಷ್ಟು ಅಪಾರ್ಟ್‌ಮೆಂಟ್‌ಗಳೂ ಬಂದಿರುವುದರಿಂದ ಅವರಿಗೀಗ ವ್ಯಾಪಾರಕ್ಕೆ ಕೊರತೆಯಿಲ್ಲ. ತರಕಾರಿ ರಾಶಿಯ ಪಕ್ಕದಲ್ಲೇ ಒಂದು ಹಣ್ಣಿನ ಜ್ಯೂಸ್ ಗಾಡಿಯೂ ನಿಂತಿತ್ತು. ಅದನ್ನು ಕಂಡ ಪುಟ್ಟ ತನಗೂ ಜ್ಯೂಸ್ ಬೇಕೆಂದು ಕೇಳಿದ. ಇಲ್ಲೆಲ್ಲಾ ಕುಡಿಯುವುದು ಬೇಡ, ಹಣ್ಣು ಖರೀದಿಸಿ ನಾವೇ ಮನೆಯಲ್ಲಿ ಮಾಡಿಕೊಳ್ಳುವುದೆಂದು ಅವನನ್ನು ಒಪ್ಪಿಸಿದೆ. ಆ ಗಾಡಿಯವನ ಬಳಿ ಹಣ್ಣು ಖರೀದಿಗೆ ನಿಂತೆ. 'ಅರೆ ಲೇಲೊ! ಸಂತ್ರೆ ಬಹುತ್ ಮೀಠೆ ಹೈ' ಎಂದ ಗಾಡಿಯ ಹುಡುಗ, ಇನ್ನೊಂದು ಕೆ.ಜಿ ತಗೊಳ್ಳಿ ಎಂದು ಒತ್ತಾಯಿಸಿ ವ್ಯಾಪಾರ ಕುದುರಿಸಿಯೂಬಿಟ್ಟ.

ಪ್ರತಿದಿನ ಆ ದಾರಿಯಲ್ಲಿ ಹೋಗುವಾಗ ಗಾಡಿಯಲ್ಲಿ ಹಣ್ಣು ಕೊಳ್ಳುವುದು ಅಭ್ಯಾಸವಾಗಿ ಬಿಟ್ಟಿತು. ಆದರೆ ಇನಿತೂ ಕನ್ನಡ ಮಾತಾಡದ ಚುರುಕು ಕಣ್ಣಿನ ಆ ಹುಡುಗನನ್ನು 'ಎಲ್ಲಿಯವನಪಾ?' ಎಂದು ಒಂದು ದಿನ ವಿಚಾರಿಸಿದೆ. 'ಹಮ್ ಯುಪಿ ಕೆ ಹೈ' ಎನ್ನುತ್ತಾ ಪ್ರವರ ಬಿಚ್ಚಿದ ಪೋರ. ತಾವು ಒಂದಿಷ್ಟು ಹುಡುಗರು ಇಲ್ಲಿಗೆ ಬಂದಿದ್ದೇವೆ. ತಾವೆಲ್ಲ ಒಟ್ಟಿಗೆ ಒಂದೇ ಬಾಡಿಗೆ ಮನೆಯಲ್ಲಿದ್ದೇವೆ. ಒಂದಿಷ್ಟು ವರ್ಷ ಇಲ್ಲಿದ್ದು ಸಾಕಷ್ಟು ದುಡ್ಡು ಮಾಡಿಕೊಂಡು ವಾಪಸ್ ಹೋಗಿಬಿಡುತ್ತೇವೆ. ಇಲ್ಲಿ ಜ್ಯೂಸ್ ಮಾಡುವಾಗ ಹಿಂಡಿದ ಹಣ್ಣಿನ ಸಿಪ್ಪೆ, ಚರಟಗಳನ್ನು ಹಸು ಸಾಕುವವರಿಗೆ ಕೊಡುತ್ತೇವೆ. ವಾರಕ್ಕಿಷ್ಟು ಎಂದು ಅವರು ದುಡ್ಡು ಕೊಡುತ್ತಾರೆ. ದುಡಿದು ಹಣ ಮಾಡಿಕೊಂಡು ವಾಪಸ್ ಹೋಗುವ ತಾವೆಲ್ಲ ಕನ್ನಡವನ್ನೇಕೆ ಕಲಿಯಬೇಕು ಎಂದು ನನ್ನನ್ನೇ ಮರುಪ್ರಶ್ನಿಸಿದ!

'ಹೆಸರೇನು?' ಎಂದಿದ್ದಕ್ಕೆ 'ಅಚ್ಚೈಕುಮಾರ್' ಎಂದ.

ಕೈಯಲ್ಲಿದ್ದ ಒಂದೇ ಕೆ.ಜಿ ಹಣ್ಣು ಎತ್ತಲಾರದಷ್ಟು ಭಾರವೆನಿಸಿ, ಕಾಲೆಳೆದುಕೊಂಡು ಕಾರೊಳಗೆ ಕೂತೆ. ಬಿರು ಬಿಸಿಲಲ್ಲೂ ಮುಂದಿನ ದಾರಿ ಮಬ್ಬಾದಂತಾಗಿ ಡಿಫಾಗರ್ ಒತ್ತಿದೆ. ವಿಂಡ್ ಶೀಲ್ಡ್ ಮೇಲೆಲ್ಲಾ ಹಳೆಯ, ಹೊಸ ಅಚ್ಚೆಕುಮಾರ್ ಮುಖಗಳೇ ರಾಚಿದಂತಾಗಿ, ಏನು ಮಾಡುವುದೆಂದು ತಿಳಿಯದೆ ಜೋರಾಗಿ ವೈಪರ್ ತಿರುಗಿಸಿದೆ. 'ಅರೆ ಚುಟ್ಟಾ ತೊ ಲೇಲೊ' ಎಂಬ ಅಚ್ಚೆಕುಮಾರನ ದನಿಗೆ ಹೆದರಿದ ಕಾರು ಜೋರಾಗಿ ಓಡತೊಡಗಿತು.


**ಅಲಕಾ ಕಟ್ಟೆಮನೆ**

ಬೆಂಗಳೂರಿನ ಸುದ್ದಿಮನೆಯೊಂದರಲ್ಲಿ ಪತ್ರಕರ್ತೆಯಾಗಿ ಕೆಲಕಾಲ ಕೆಲಸ. ನಂತರದ ಕೆಲವು ವರ್ಷಗಳು ಅಮೆರಿಕೆಯಲ್ಲಿ ವಾಸ. ಪ್ರಸ್ತುತ ಮೈಸೂರಿನಲ್ಲಿ ನೆಲೆ. 'ಶಾಲ್ಮಲೆಯ ಹೊನಲಲ್ಲಿ' ಎಂಬ ಕಥಾಸಂಕಲನ ಪ್ರಕಟವಾಗಿದೆ.